159ನಲ್ಲ
09

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಚಿದಾನಂದ ಎಂ.ಗೌಡ ರವರು ನಿಯಮ 330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

ಬೆಂಗಳೂರು ಕೊಡಿಗೇಹಳ್ಳಿ ಮುಖ್ಯರಸ್ತೆಯು ಅನೇಕ ಬಡಾವಣೆಗಳಿಗೆ ಸಂಪರ್ಕ ರಸ್ತೆಯಾಗಿದ್ದು, ಇಲ್ಲಿ ವಾಹನ ದಟ್ಟಣೆಯು ಹೆಚ್ಚಾಗಿದ್ದು, ಅನೇಕ ಬಿಎಂಟಿಸಿ ಬಸ್ಸುಗಳು ಕೊಡಿಗೇಹಳ್ಳಿ ಸರ್ಕಲ್‌ನಿಂದ ಪ್ರಾರಂಭವಾಗಿ ಸಂಚರಿಸುತ್ತವೆ. ಕೊಡಿಗೇಹಳ್ಳಿ ಸರ್ಕಲ್ ನಿಂದ ಸಾವಿರಾರು ಪ್ರಯಾಣಿಕರು ಅದರಲ್ಲೂ ಮಹಿಳಾ ಪ್ರಯಾಣಿಕರು ಸಂಚಾರವನ್ನು ಮಾಡುತ್ತಿದ್ದು, ಇವರುಗಳು ಯಾವುದೇ ತಂಗುದಾಣವಿಲ್ಲದೆ ಅಂಗಡಿ ಮತ್ತು ಬಾರ್‌ಗಳ ಮುಂದೆ ನಿಲ್ಲುತ್ತಿರುವುದನ್ನು ನಾನೇ ಖುದ್ದು ಗಮನಿಸಿರುತ್ತೇನೆ ಮತ್ತು ಈ ಬಿಎಂಟಿಸಿ ಬಸ್ಸುಗಳು ಸಹ ಗಣೇಶ ದೇವಸ್ಥಾನ ಸರ್ಕಲ್‌ನ ಸುತ್ತಮುತ್ತ ನಿಲುಗಡೆಗೊಳ್ಳುವುದರಿಂದ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗುತ್ತದೆ.

ಅದುದರಿಂದ, ಇಲ್ಲಿನ ಸಾರ್ವಜನಿಕರ ಬಹುದಿನಗಳ ಬೇಡಿಕೆಯಾಗಿರುವ ಬಿಎಂಟಿಸಿ ಮಧ್ಯಮ ಗಾತ್ರದ ಬಸ್ ನಿಲುಗಡೆಯ ತಾಣವನ್ನು ನಿರ್ಮಿಸಲು ಸಹ ಬಿಬಿಎಂಪಿಯಲ್ಲಿ ಸ್ಥಳಾವಕಾಶದ ಲಭ್ಯತೆಯಿದ್ದು, ಈ ಕೂಡಲೇ ಬಸ್ ತಂಗುದಾಣವನ್ನು ನಿರ್ಮಾಣ ಮಾಡುವ ಬಗ್ಗೆ.

**ಉತ್ತರ:**

ಬೆಂಗಳೂರು ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕೊಡಿಗೇಹಳ್ಳಿ ಮುಖ್ಯರಸ್ತೆಯ ಕೊಡಿಗೇಹಳ್ಳಿ ವೃತ್ತದಿಂದ ವಿವಿಧ ಸ್ಥಳಕ್ಕೆ ಪ್ರಯಾಣಿಸಲು ಸಾರ್ವಜನಿಕರು ಸದರಿ ವೃತ್ತಕ್ಕೆ ಬಂದು ಬಿ.ಎಂ.ಟಿ.ಸಿ ಬಸ್ ಮುಖಾಂತರ ವಿವಿಧ ಸ್ಥಳಗಳಿಗೆ ಸಾಗುತ್ತಿದ್ದು, ಸದರಿ ಸ್ಥಳದಲ್ಲಿ ಬಿ.ಎಂ.ಟಿ.ಸಿ ಬಸ್ ತಂಗುದಾಣ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಸ್ಥಳದಲ್ಲಿ ಬಸ್ ತಂಗುದಾಣವನ್ನು ನಿರ್ಮಿಸಲು ಸ್ಥಳಾವಕಾಶದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲಾಗುವುದು.

ಮುಂದುವರೆದು, ಬಿ.ಎಂ.ಟಿ.ಸಿ ಬಸ್‌ಗಳು ಗಣೇಶ ದೇವಸ್ಥಾನ ವೃತ್ತದ ಸುತ್ತಮುತ್ತ ನಿಲುಗಡೆಗೊಳ್ಳುತ್ತಿರುವುದರಿಂದ ಸಂಚಾರಕ್ಕೆ ತೀವ್ರ ಅಡಚಣೆ ಆಗುತ್ತಿರುವುದು ಸರ್ಕಾರದ ಗಮನದಲ್ಲಿದ್ದು, ಸದರಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಕೊಡಿಗೇಹಳ್ಳಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ ಮುನೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಪಾಲಿಕೆಯ ಸ್ವತ್ತಿನಲ್ಲಿ ಬಸ್ ಬೇ ಮತ್ತು ಬಸ್ ನಿಲುಗಡೆಯ ತಾಣವನ್ನು ನಿರ್ಮಿಸುವ ಪ್ರಸ್ತಾವನೆಯು ಪಾಲಿಕೆಯ ಪರಿಶೀಲನೆಯಲ್ಲಿರುತ್ತದೆ.

**ನಅಇ 588 ಎಂಎನ್‌ವೈ 2026**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು